ಆ)	ನಮೂನೆ 50		ನಮೂನೆ 53	
ತಾಲ್ಲೂಕು	ಮಂಜೂರಿ	ವಜಾ	ಮಂಜೂರಿ	ವಜಾ
ಚಿಕ್ಕಮಗಳೂರು	1442	1952	185	----
ತರೀಕೆರೆ	372	2828	22	1298
ಕಡೂರು	1542	2336	198	1433
ಒಟ್ಟು	3356	7589	405	4556

ಇ) ನಮೂನೆ 50 ರಲ್ಲಿ 1874 ಮತ್ತು ನಮೂನೆ 53 77 ಪ್ರಕರಣಗಳಲ್ಲಿ ಸಾಗುವಳಿ ಸಾಗುವಳಿ ಚೀಟಿ ನೀಡಲಾಗಿದೆ.

ಈ) ಮಂಜೂರಾದ ಪ್ರಕರಣಗಳಲ್ಲಿ 1810 ಸಾಗುವಳಿ ಚೀಟಿ ನೀಡಲು ಬಾಕಿ ಇದೆ. ಬಾಕಿ ಇಡಲು ಕಾರಣ ಈ ಕೆಳಕಂಡಂತಿದೆ.

1005 ಪ್ರಕರಣಗಳಲ್ಲಿ ..... ಪಾವತಿಸಿರುವುದಿಲ್ಲ

22 ಪ್ರಕರಣಗಳಲ್ಲಿ ಅರಣ್ಯ ವ್ಯಾಪ್ತಿಯಲ್ಲಿರುವ ಬಗ್ಗೆ ವಿವಾದ

57 ಪ್ರಕರಣಗಳಲ್ಲಿ ಅಮೃತ್ ಮಹಲ್ ಕಾವಲ್ ಜಮೀನಾಗಿದ್ದು, ಸಕ್ರಮಗೊಳಿಸಲು ಅವಕಾಶವಿರುವುದಿಲ್ಲ.

726 ಪ್ರಕರಣಗಳಲ್ಲಿ ಕಾನೂನು ಬಾಹಿರವಾಗಿ ಸಕ್ರಮಗೊಳಿಸಿರುವ ಆರೋಪದ ಬಗ್ಗೆ ಇಲಾಖಾ ವಿಚಾರಣೆಗಾಗಿ

1810

ಬೆಳ್ತಂಗಡಿ ತಾಲ್ಲೂಕು ಮೋಜಣಿ ಕಛೇರಿಗೆ ಸ್ವಂತ ಕಟ್ಟಡದ ವ್ಯವಸ್ಥೆ

82 (115) ಶ್ರೀ ಪ್ರಭಾಕರ ಬಂಗೇರ್ ಕೆ. (ಬೆಳ್ತಂಗಡಿ) ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೋಜಣಿ ಕಛೇರಿಗೆ ಸಂಬಂಧಪಟ್ಟ ಹಾಗೆ ರಾಜ್ಯದಲ್ಲಿ ಎಷ್ಟು ತಾಲ್ಲೂಕು ಮತ್ತು ಜಿಲ್ಲಾ ಕಛೇರಿಗಳು ಸ್ವಂತ ಕಟ್ಟಡದಲ್ಲಿವೆ ಸ್ವಂತ ಕಟ್ಟಡವನ್ನು ವ್ಯವಸ್ಥೆಗೊಳಿಸುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೆ?

ಆ) ಬೆಳ್ತಂಗಡಿ ತಾಲ್ಲೂಕು ಮೋಜಣಿ ಕಛೇರಿ ಕಟ್ಟಡದ ನಿರ್ಮಾಣಕ್ಕಾಗಿ ಜಮೀನು ಮಂಜೂರಾಗಿದೆಯೇ? ಹಾಗಿದ್ದಲ್ಲಿ ಅವರ ವಿವರಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು) :

ಅ) ಭೂಮಾಪನ ಇಲಾಖೆಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ತಾಲ್ಲೂಕು ಮಟ್ಟದಲ್ಲಿ 175 ಕಛೇರಿಗಳು, ಜಿಲ್ಲಾ ಮಟ್ಟದಲ್ಲಿ 27 ಕಛೇರಿಗಳು ಕಾರ್ಯ ನಿರ್ವಹಿಸುತ್ತಿದ್ದು ಇವುಗಳ ಪೈಕಿ 61 ತಾಲ್ಲೂಕು ಮಟ್ಟದ ಕಛೇರಿಗಳು ಮತ್ತು 14 ಜಿಲ್ಲಾ ಮಟ್ಟದ ಕಛೇರಿಗಳು ಸರ್ಕಾರಿ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಕೇಂದ್ರ ಪುರಸ್ಕೃತ ಯೋಜನಾ ಕಾರ್ಯಕ್ರಮದಡಿಯಲ್ಲಿ ಲಭ್ಯವಿರುವ ರೂ. 120.00 ಲಕ್ಷಗಳ ಅನುದಾನದಲ್ಲಿ ಭೂಮಾಪನ ಇಲಾಖೆಯ ಅಧೀನ ಕಛೇರಿಗಳ ಸಲುವಾಗಿ ಸ್ವಂತ ಕಟ್ಟಡವನ್ನು ಹೊಂದಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಇದಲ್ಲದೆ ಹತ್ತನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ದಾಖಲೆ ಕೊಠಡಿಗಳನ್ನು ನಿರ್ಮಿಸಲು ರೂ. 261 ಲಕ್ಷಗಳ ಅನುದಾನ ಸಹ ಲಭ್ಯವಿರುತ್ತದೆ.

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಮೋಜಣಿ ಕಛೇರಿ ಕಟ್ಟಡಕ್ಕಾಗಿ ಯಾವ ಜಮೀನು ಮಂಜೂರಾಗಿರುವುದಿಲ್ಲ.

ಗ್ರಾಮಲೆಕ್ಕಿಗರಿಗೆ ಕೇಂದ್ರ ಸ್ಥಾನದಲ್ಲಿ ವಸತಿ ಸೌಲಭ್ಯ

83 (117) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗ್ರಾಮಲೆಕ್ಕಿಗರು ಅವರು ಕಾರ್ಯ ನಿರ್ವಹಿಸುವ ಕೇಂದ್ರ ಸ್ಥಾನದಲ್ಲಿ ವಾಸ್ತವ್ಯವಿರುವ ಸಲುವಾಗಿ ವಸತಿ ಸೌಲಭ್ಯವನ್ನು ಒದಗಿಸಿಕೊಡಲು ಸರ್ಕಾರವು ನಿರ್ಧರಿಸಿದೆಯೇ; ಹಾಗಾದರೆ ಅದರ ವಿವರಗಳೇನು;

ಆ) ರಾಜ್ಯದಲ್ಲಿ ಗ್ರಾಮಲೆಕ್ಕಿಗರುಗಳಿಗೆ ಎಷ್ಟು ವಸತಿ ಸೌಲಭ್ಯವನ್ನು ಒದಗಿಸಿಕೊಡಲಾಗಿದೆ; ಈ ಕುರಿತು ಸರ್ಕಾರವು ಕಾರ್ಯಕ್ರಮಗಳನ್ನೇನಾದರೂ ರೂಪಿಸಿ ಜಾರಿಗೊಳಿಸುತ್ತಿದೆಯೇ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಹೌದು. ವಸತಿ ಸೌಲಭ್ಯ ಇಲ್ಲದಿರುವ ಗ್ರಾಮಲೆಕ್ಕಿಗರ ಕೇಂದ್ರ ಸ್ಥಾನದಲ್ಲಿ ಹಂತ ಹಂತವಾಗಿ ಕರ್ನಾಟಕ ಭೂ ಸೇನಾ ನಿಗಮದ ಮತಿಯಿಂದ ವಸತಿ ಗೃಹ ನಿರ್ಮಾಣ ಕೈಗೊಳ್ಳಲಾಗಿದೆ.

ಆ) ರಾಜ್ಯದಲ್ಲಿ ಈವರೆಗೆ 398 ಗ್ರಾಮಲೆಕ್ಕಿಗರಿಗೆ ವಸತಿ ಗೃಹ ಸೌಲಭ್ಯವನ್ನು ಒದಗಿಸಲಾಗಿದೆ. ಗ್ರಾಮಲೆಕ್ಕಿಗರ ವಸತಿಗೃಹ ನಿರ್ಮಾಣಕ್ಕಾಗಿ ಆಯವ್ಯಯದಲ್ಲಿ ಪ್ರತಿ ವರ್ಷ ಅನುದಾನ ನಿಗದಿಪಡಿಸಿದ್ದು, ಜಿಲ್ಲಾಧಿಕಾರಿಗಳು ಲಭ್ಯಗೊಳಿಸುವ ಸರ್ಕಾರಿ ನಿವೇಶನದಲ್ಲಿ ವಸತಿ ಗೃಹ ನಿರ್ಮಿಸುವ ಕಾರ್ಯಕ್ರಮ ಜಾರಿಯಲ್ಲಿದೆ.

ಪಾಣೆ ಮಂಗಳೂರು ಸೇತುವೆಯು ಬಿರುಕು ಬಿಟ್ಟಿರುವುದು

84 (118) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಷ್ಟ್ರೀಯ ಹೆದ್ದಾರಿ-48ರ ಪಾಣೆ ಬೆಂಗಳೂರು ಸೇತುವೆಯು ಬಿರುಕು ಬಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದ ನಂತರ ತೆಗೆದುಕೊಂಡ ಕ್ರಮಗಳೇನು; ಅದನ್ನು ದುರಸ್ತಿ ಮಾಡಲಾಗಿದೆಯೇ; ಇಲ್ಲವಾದಲ್ಲಿ ಅದನ್ನು ಯಾವಾಗ ಪೂರ್ಣ ಪ್ರಮಾಣದ ದುರಸ್ತಿ ಕಾರ್ಯ ಕೈಗೊಳ್ಳಲಾಗುವುದು;

ಆ) ಸದರಿ ರಸ್ತೆಯಲ್ಲಿ ಸಂಚರಿಸುತ್ತಿದ್ದ ಎಲ್ಲಾ ವಾಹನಗಳ ಬದಲಿ ಸಂಚಾರ ವ್ಯವಸ್ಥೆಯನ್ನು ಬೆಳ್ತಂಗಡಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಕಡೂರು-ಬಂಟ್ವಾಳ ರಸ್ತೆ, ಸುಬ್ರಹ್ಮಣ್ಯ-ಧರ್ಮಸ್ಥಳ-ಉಡುಪಿ ರಸ್ತೆ, ಉಪ್ಪಿನಂಗಡಿ-ಗುರುವಾಯನಕೆರೆ ರಸ್ತೆಗಳಲ್ಲಿ ಮಾಡಲಾಗಿರುವುದರಿಂದ ಈ ಹೆದ್ದಾರಿಗಳು ಘನ ವಾಹನಗಳ ಸಂಚಾರವನ್ನು ತಡೆದುಕೊಳ್ಳಲು ಅಸಾಧ್ಯವಾಗಿ ರಸ್ತೆಗಳು ದುರಸ್ತಿಗೊಂಡಿದ್ದು, ವಾಹನ ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಈ ಕುರಿತು ತೆಗೆದುಕೊಂಡ ಮತ್ತು ತೆಗೆದುಕೊಳ್ಳಲಿರುವ ಕ್ರಮಗಳೇನು?